**ಪ್ರಥಮ ಭಾಷೆ ಕನ್ನಡ 01K** **ಘಟಕ ಪರೀಕ್ಷೆ -4** **ಘಟಕ: ಎದೆಗೆ ಬಿದ್ದ ಅಕ್ಷರ**

01. ಇಂದಲ್ಲ–ನಾಳೆ ಫಲ ಕೊಡುವ ಅಂಶಗಳು–

A) ಅರಿವು–ದೇವರು B) ಪ್ರಜ್ಞೆ–ಜ್ಞಾನ

C) ಸುಳ್ಳು–ಮೋಸ D) ಭೂಮಿಗೆ ಬಿದ್ದ ಬೀಜ; ಎದೆಗೆ ಬಿದ್ದ ಅಕ್ಷರ

02. 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು

A) ಮನೆಮಂಚಮ್ಮ B) ಅಶೋಕ ಪೈ

C) ಫ.ಗು.ಹಳಕಟ್ಟಿ D) ವಚನಕಾರರು

03. ಅಶೋಕ ಪೈ ಅವರ ವೃತ್ತಿ

A) ಗುಡಿ ಕಟ್ಟುವುದು B) ಮನೋವೈದ್ಯರು

C) ಶಿಕ್ಷಕರು D) ಲೇಖಕರು

04. ಮನೆ ಮಂಚಮ್ಮನ ಕತೆ ಹೇಳಿದ ಕವಿ

A) ಕವಿ ಸಿದ್ಧಲಿಂಗಯ್ಯ B) ಅಶೋಕ ಪೈ

C) ದೇವನೂರು ಮಹಾದೇವ D) ಫ.ಗು.ಹಳಕಟ್ಟಿ

05. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ

A) ತನ್ನಷ್ಟಕ್ಕೆ ತಾನಿರುವುದು B) ಕೇಳಿ ತಿಳಿದದ್ದು

C) ತರ್ಕ D) ಕ್ರಿಯೆಯ ಅನುಭವದಿಂದ ಒಡಮೂಡುವುದು.

06. ಕೊಲೆ ಸುಲಿಗೆ ದ್ವೇಷ ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು ಘಾಸಿಗೊಳಿಸುವುದು

A) ಹಿಂಸೆ–ದ್ವೇಷವನ್ನು B) ಪರಿಸರವನ್ನು

C) ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನು D) ತನ್ನ ಆಳದ ವ್ಯಷ್ಟಿ ಮನಸ್ಸನ್ನು

07. ಆವಾಹಿಸು– ಎಂದರೆ

A) ಊಹೆ ಮಾಡು B) ಮೈಮೇಲೆ ಬರುವಂತೆ ಮಾಡಿಕೊ

C) ಪ್ರವಹಿಸು D) ತಳಮಳಗೊಳ್ಳು

08. ದೇವನೂರು ಮಹಾದೇವ ಅವರ ಜನ್ಮ ವರ್ಷ

A) ಕ್ರಿ.ಶ. 1949 B) ಕ್ರಿ.ಶ. 1947

C) ಕ್ರಿ.ಶ. 1936 D) ಕ್ರಿ.ಶ. 1904

09. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ದೇವನೂರರ ಕೃತಿ

A) ಒಡಲಾಳ B) ದ್ಯಾವನೂರು

C) ಎದೆಗೆ ಬಿದ್ದ ಅಕ್ಷರ D) ಕುಸುಮಬಾಲೆ



LIVEWORKSHEETS

10. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ." ಈ ಮಾತನ್ನು ಹೇಳಿದವರು

A) ಮನೆಮಂಚಮ್ಮ–ದೇವನೂರರಿಗೆ B) ಗ್ರಾಮಸ್ಥರು–ಮನೆಮಂಚಮ್ಮಳಿಗೆ

C) ಮನೆಮಂಚಮ್ಮ–ಗ್ರಾಮಸ್ಥರಿಗೆ D) ದೇವನೂರರು–ಮನೆಮಂಚಮ್ಮಳಿಗೆ

11. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು" ಈ ವಾಕ್ಯ ಸಂಬಂಧಿಸಿದ್ದು–

A) ಸಂಶೋಧಕರಿಗೆ B) ವಚನಕಾರರಿಗೆ

C) ಹಳಕಟ್ಟಿಯವರಿಗೆ D) ಅಶೋಕ ಪೈ ಅವರಿಗೆ

12. ಸಮಾಸದಲ್ಲಿ ಸಮಸ್ತಪದವನ್ನು ಬಿಡಿಸಿ ಬರೆಯುವುದಕ್ಕೆ ಹೀಗೆನ್ನುತ್ತಾರೆ

A) ವಿಗ್ರಹವಾಕ್ಯ B) ಉತ್ತರಪದ

C) ಸಮಸ್ತಪದ D) ಪೂರ್ವಪದ

13. ಈ ಕೆಳಗಿನವುಗಳಲ್ಲಿ ಅಂಶಿ ಸಮಾಸಕ್ಕೆ ಉದಾಹರಣೆ–

A) ರಾಮಲಕ್ಷ್ಮಣರು B) ತಲೆನೋವು

C) ಆ ಹುಡುಗ D) ಅಂಗೈ

14. 'ಹೊಸಗನ್ನಡ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ–

A) ತತ್ಪುರುಷ ಸಮಾಸ B) ದ್ವಂದ್ವ ಸಮಾಸ

C) ಕರ್ಮಧಾರಯ ಸಮಾಸ D) ಗಮಕ ಸಮಾಸ

15. ಅನ್ಯಪದದ ಅರ್ಥ ಮುಖ್ಯವಾಗಿರುವ ಸಮಾಸ

A) ತತ್ಪುರುಷ ಸಮಾಸ B) ಬಹುವ್ರಿಹಿ ಸಮಾಸ

C) ದ್ವಿಗು ಸಮಾಸ D) ಅರಿ ಸಮಾಸ



LIVEWORKSHEETS